ಅಂತಹವರಿಗೆ ಓವರ್‌ಲುಕ್ ಮಾಡುತ್ತೇವೆ. ಸಾಮಾನ್ಯವಾಗಿ ಯಾರಿಗೂ ಓವರ್‌ಲುಕ್ ಮಾಡುವುದಿಲ್ಲ. ಚೆಂಡರ್‌ಗಳು ಬಂದಿದ್ದರೆ ಅದನ್ನು ಯಾವ್ಯಾವ ಪರತ್ತುಗಳ ಪ್ರಕಾರ ಹಾಕಿದ್ದಾರೆಂಬುದನ್ನು ದೀರ್ಘವಾಗಿ ಚೆಕ್ನಿಕಲ್ ಸಬ್‌ಕಮಿಟಿಯವರು ಎಂ.ಐ.ಪಿ.ಸಿ. ಮಾಡಿದ್ದಾರೆ.

ಶ್ರೀ ಎನ್. ಹಚ್ಚೇಮಾಸ್ತಿಗೌಡ.—ಅಲ್ಲ ಚೆಕ್ನಿಕಲ್ ಮನುಷ್ಯರು ಇದ್ದರೂ ಕೂಡ ನಂದರ್ಭಾನು ಸಾರವಾಗಿ ತೀರ್ಮಾನಮಾಡುವುದಕ್ಕೆ ಅವಕಾಶವಿಲ್ಲದೇ ಇರುವಹಾಗೆ ಯಾವುದಾದರೂ ಒಂದು ನಿಯಮದಂತೆ ಕೆಲಸಮಾಡಬೇಕೆಂದು ಸರ್ಕಾರದವರು ಗೊತ್ತುಮಾಡಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಚೆಕ್ನಿಕಲ್ ಸಬ್ ಕಮಿಟಿ ಮುಂದೆ ಚೆಂಡರ್ ಬಂದಾಗ ಅದನ್ನು ಅಲ್ಲಿರತಕ್ಕ ಇಂಜನಿಯರ್ಸ್ ಒಂದು ಸಾರಿ, ಎರಡು ಸಾರಿ ನೋಡುತ್ತಾರೆ. ಚೆಂಡರ್ ಪ್ರಶ್ನೆಯೇ ಅಲ್ಲ. ಐಟಂಗಳನ್ನೂ ಸಹ ನೋಡುತ್ತಾರೆ. ನಮ್ಮ ಎಸ್ಟಿಮೇಟಿಗೆ ಅನುಗುಣವಾಗಿದೆಯೇ ಎಂಬುದನ್ನೂ ಸಹ ನೋಡುತ್ತಾರೆ. ಅವರ ಹತ್ತಿರ ಇರತಕ್ಕ ಆರ್ಗನೈಜೇಷನ್ ನೋಡುತ್ತಾರೆ. ಲೋಯೆಸ್ಟ್ ಚೆಂಡರ್ ಆಗಿದ್ದರೂ ಅವನ ಹತ್ತಿರ ಶಕ್ತಿ ಇದೆಯೇ, ಹಿಂದೆ ಎಷ್ಟೆಷ್ಟು ಕೆಲಸಮಾಡಿದ್ದಾನೆ ಎಂಬುದನ್ನೂ ಸಹ ನೋಡುತ್ತಾರೆ.

ಶ್ರೀ ಎಸ್. ಶಿವಪ್ಪ.—ಈಗಿರತಕ್ಕ ಚೀಫ್ ಇಂಜನಿಯರಿಗೂ ಮತ್ತು ಈ ಕೆಲಸ ಕೊಟ್ಟಿರತಕ್ಕ ಕಂಟ್ರಾಕ್ಟ್‌ದಾರನಿಗೂ ಜಿಜ್ಞಾಸೆ ಬಂದು ಈ ಹೇಮಾವತಿ ಯೋಜನೆಯ ಕೆಲಸ ಬಹಳ ಮುಂದೂಡಲ್ಪಟ್ಟಿದೆ. ಇದರಿಂದ ಎಷ್ಟೋ ವೇಗವಾಗಿ ನಡೆಯಬೇಕಾದಂಥ ಕೆಲಸಕ್ಕೆ ಬಹಳವಾಗಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಬಂದಿಲ್ಲ.

Exemption of Route tax to Vehicles plying in Gulbarga Division

68. **Sri L. SRIKANTAIAH** (Nanjangud).—

Will the Minister for Transport be pleased to state :—

(*a*) whether the Government have ordered the reduction or exemption of route tax to vehicles plying in Gulbarga District by Notifications issued between 8th July 1966 to 12th December 1967;

(*b*) if so, the number of routes that get the benefit under the above Notifications;

(*c*) the net financial loss sustained by the Government due to this reduction or exemption of route tax;

(*d*) on whose recommendations this reduction was given in those routes?

A.—**Sri MOHAMED ALI** (Minister for Transport).—

(*a*) Yes. Reduction in the rate of tax has been allowed.

(*b*) Three.

(*c*) Rs. 9,845 per year.

(*d*) On the recommendation of the Officers of the Motor Vehicles Department and in consultation with the Officers of Public Works Department.

ಶ್ರೀ ಎಂ. ನಾಗಪ್ಪ.—ಸ್ವಾಮಿ, 8-7-1966 ರಿಂದ 12-12-1967ರವರೆಗೆ ಗುಲ್ಬರ್ಗಾ ಜಿಲ್ಲೆಗೆ ವೆಹಿಕಲ್ಸ್ ತೆರಿಗೆ ವಸೂಲು ಮಾಡುವುದಕ್ಕೆ ವಿನಾಯ್ತಿ ಕೊಟ್ಟಿದ್ದೀರಿ, ಹೀಗೆಯೇ ಇತರ ಜಿಲ್ಲೆಗಳಿಗೂ ವಿನಾಯ್ತಿ ಕೊಟ್ಟಿದ್ದೀರಾ, ಗುಲ್ಬರ್ಗಾ ಜಿಲ್ಲೆಗೆ ವಿನಾಯ್ತಿ ಕೊಡುವುದಕ್ಕೆ ಅಧಿಕಾರಿಗಳಿಂದ ಏನು ವರದಿ ಬಂದಿದೆ?

Sri MOHAMAD ALI.—The question put was regarding Gulbarga District. If the hon'ble member puts another question regarding other districts, I will be able to furnish information.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಪೋಟಾರು ವಾಹನಗಳ ಇರಾಖೆಯ ಅಧಿಕಾರಿಗಳ ಶಿಫಾರಸ್ಸುಗಳ ಮೇರೆಗೆ ಲೋಕೋಪಯೋಗಿ ಇರಾಖೆಯ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿ ವಾಹನಗಳ ಮಾರ್ಗ ತೆರಿಗೆಯನ್ನು ವಸೂಲು ಮಾಡುವುದಕ್ಕೆ ವಿನಾಯ್ತಿಯನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ, ಅವರು ಯಾವ ಕಾರಣವನ್ನು ನಮೂದುಮಾಡಿ ಏತಕ್ಕೋಸ್ಕರ ಅದಕ್ಕೆ ವಿನಾಯ್ತಿಯನ್ನು ಕೊಡಬೇಕೆಂದು ಹೇಳಿದ್ದಾರೆ ?

Sri MOHAMED ALI.—These routes are in fact cart tracks on which road permits have been granted to the carriage operators to ply buses. In the black cotton soil of Hyderabad Karnatak area which is not very much served by roads, these operators themselves improve upon cart tracks and make them fit for operation of buses. During monsoon practically for four to five months they will not be in a position to run buses and there is the great risk of wear and tear for them.

ಶ್ರೀ ಎರ್. ಶ್ರೀಕಂಠಯ್ಯ.—ಪಬ್ಲಿಕ್‌ವರ್ಕ್ಸ್ ಇರಾಖೆಗೆ ಸಂಬಂಧಪಟ್ಟ ವರದಿ ಸಬಾರ್ಡಿನೇಟ್ ಲೆಜಿಸ್ಲೇಷನ್‌ನಲ್ಲಿ ಬಂದಾಗ ನಾವು ನೋಡಿದೆವು. ಅಲ್ಲಿ ಯಾವ ರಸ್ತೆಯನ್ನೂ ರಿಪೇರಿ ಮಾಡಿಲ್ಲ. ಪಬ್ಲಿಕ್ ವರ್ಕ್ಸ್ ಇರಾಖೆಯ ವರದಿಯನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಅಲ್ಲ ಬಸ್ಸುಗಳನ್ನು ಓಡಿಸತಕ್ಕ ಪ್ರೈವೇಟ್ ಬಸ್ ಮಾಲೀಕರು ಸಾವಿರಾರು ರೂಪಾಯಿಗಳನ್ನು ಗಳಿಸುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಹೀಗಿದ್ದರೂ ಸಹ ಅವರಿಗೆ ಏತಕ್ಕೆ ತೆರಿಗೆ ವಿನಾಯ್ತಿ ಕೊಟ್ಟಿದ್ದೀರಿ ?

Sri MOHAMED ALI.—These are roads which are not maintained by the P.W.D. or by local bodies nor even formed by P.W.D. These are *katcha* roads. On the recommendation of the Executive Engineer and R.T.A. we allow tax concessions.

ಶ್ರೀ ಎಂ. ನಾಗಪ್ಪ.—ಈಗ ತಾವು ಉತ್ತರವನ್ನು ಕೊಟ್ಟಿರಿ ಆ ರಸ್ತೆಗಳು ಪಿ.ಡಬ್ಲ್ಯು.ಡಿ. ರಸ್ತೆಯಲ್ಲ. ತಾಲ್ಲೂಕ್ ಬೋರ್ಡ್ ರಸ್ತೆಯಲ್ಲ ಎಂದು. ತಾವು ಇದನ್ನು ಜವಾಬ್ದಾರಿಯುತ ವಾಗಿ ಹೇಳುತ್ತಿದ್ದೀರಾ ? ಎರಡನೆಯದು ಅಲ್ಲಿನ ಪ್ರೈವೇಟ್ ಬಸ್ ಮಾಲೀಕರಿಗೆ ಈ ತರಹ ತೆರಿಗೆಯ ವಿನಾಯ್ತಿಯನ್ನು 1962 ಮತ್ತು 1967ನೇ ಇಸವಿಯಲ್ಲಿ ಚುನಾವಣೆ ನಡೆದ ಸಮಯಕ್ಕೆ ಸರಿಯಾಗಿ ಕೊಟ್ಟಿದ್ದೀರಿ ಅಲ್ಲವೇ ?

Sri MOHAMED ALI.—These concessions have been granted on the report of the Executive Engineer and R.T.A. If any specific instance is there where wrong report has been sent to the Government, enquiry will be held. So far as grant of concession on the eve of election is concerned, it is not correct.

Sri S. SIVAPPA.—Under what provision of law the Government can give exemption from collecting vehicle taxes ?

Sri MOHAMED ALI.—Under section 16 of the Motor Vehicles Tax Act the Government can give exemption.

Sri H. SIDDAVEERAPPA.—Under section 16 of the Act, is there provision to give exemption to cases mentioned by you during the course of reply or is it only for vehicles not running in that particular area ?

Sri MOHAMED ALI.—On the merit of cases the Government has got powers to give reduction or exemption from payment of tax.

Sri V. N. PATIL.—In Bidar and Gulbarga districts is it not a fact that it is risky for the passengers to travel in private buses and every year 10 to 20 accidents occur ?

Sri MOHAMED ALI.—I do not think it is dangerous.

Irrigation tanks in Kalghatgi and Hubli Taluks

69. Sri S. S. SHETTAR (Hubli).—

Will the Minister for Public Works be pleased to state :—

(*a*) whether there are any irrigation tanks in Kalghatgi and Hubli Taluks maintained by Government ;

(*b*) whether any villages in Hubli and Kalghatgi Taluks have been assessed Neerasaragi Akar ;

(*c*) whether Government have received any objections from the agriculturists for having illegally assessed Neerasaragi Akar in the above two Taluks of Dharwar District ?

A.—Sri A. J. DODDAMETI (Minister of State for Minor Irrigation).—

(*a*) Yes

(*b*) Yes.

(*c*) Yes.

ಶ್ರೀ ಎಸ್. ಎಸ್. ಶೆಟ್ಟರ್,—ನ್ಯಾಯಿ, ಧಾರವಾಡ ಜಿಲ್ಲೆಯ ಕಲಘಟಗಿ ಮತ್ತು ಹುಬ್ಬಳ್ಳಿ ತಾಲ್ಲೂಕುಗಳಲ್ಲಿ ನೀರು ನರದಿ ಆಕಾರವನ್ನು ವಸೂಲ ಮಾಡುತ್ತಿದ್ದಾರೆಂದು ಅಲ್ಲಿಯ ಬೇಸಾಯಗಾರರಿಂದ ತಕರಾರು ಬಂದಿವೆ ಎಂದು ಹೇಳಿದ್ದೀರಿ, ಇದರ ಬಗ್ಗೆ ಏನು ನಿರ್ಣಯವನ್ನು ತೆಗೆದುಕೊಂಡಿದ್ದೀರಿ ?

†ಶ್ರೀ ಎ. ಜೆ. ದೊಡ್ಡಮೇಟಿ.—ತಕರಾರು ಅರ್ಜಿಗಳನ್ನು ವಿಚಾರ ಮಾಡುವುದಕ್ಕೆ ಕಾನೂನು ಪ್ರಕಾರ ಅಸಿಸ್ಟೆಂಟ್ ಕಮೀಷನರಿಗೆ ಅಧಿಕಾರ ಇದೆ. ಕೊನೆಯದಾಗಿ ಅವರಿಗೆ ಅಪೀಲು ಮಾಡಬಹುದು. ಈಗ ಕಲಘಟಗಿ ತಾಲ್ಲೂಕಿನಿಂದ 260 ಮತ್ತು ಹುಬ್ಬಳ್ಳಿ ತಾಲ್ಲೂಕಿನಿಂದ 150 ತಕರಾರು ಅರ್ಜಿಗಳು ಬಂದಿವೆ. ಅವುಗಳನ್ನು ಆದಷ್ಟು ಬೇಗ ಮುಗಿಸಿ ನಿಕಾಲೆ ಮಾಡಬೇಕೆಂದು ಸೂಚನೆ ಕೊಡರಾಗಿದೆ.

ಶ್ರೀ ಎಸ್. ಎಸ್. ಶೆಟ್ಟರ್.—ರೈತರು ಇನ್ನೂ ತಕರಾರು ಅರ್ಜಿಯನ್ನು ಕೊಡುವುದಕ್ಕೆ ಅವಕಾಶವಿದೆಯೇ ?

ಶ್ರೀ ಎ. ಜೆ. ದೊಡ್ಡಮೇಟಿ.—ತಕರಾರು ಅರ್ಜಿಗಳನ್ನು ಕೊಡಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಈ ಪ್ರಶ್ನೆಯಲ್ಲಿ ನೀರು ನರದಿ ಆಕಾರವನ್ನು ಇಲ್ಲೀಗಲ್ ಆಗಿ ವಿಧಿಸುತ್ತಿರುವುದರ ಬಗ್ಗೆ ಬೇಸಾಯಗಾರರಿಂದ ತಕರಾರುಗಳೇನಾದರೂ ಬಂದಿವೆಯೇ ಎಂದು ಕೇಳಿದ್ದಕ್ಕೆ ಹಾಂದು ಎಂದು ಹೇಳಿದ್ದೀರಿ, ಹಾಗಾದರೆ ಆ ತೆರಿಗೆಯನ್ನು ವಸೂಲು ಮಾಡುತ್ತಿರುವುದು ಇಲ್ಲೀಗಲ್ ಎಂದು ಒಪ್ಪಿಕೊಂಡಿದ್ದೀರಿ. ಅವರಿಗೆ ಏನು ಶಿಕ್ಷೆಯನ್ನು ವಿಧಿಸಿದ್ದೀರಿ ?

ಶ್ರೀ ಎ. ಜೆ. ದೊಡ್ಡಮೇಟಿ.—ಆ ವಸೂಲ ಇಲ್ಲೀಗಲ್ ಎಂದು ರೈತರು ಕೊಟ್ಟಿರುವ ತಕರಾರುಗಳು ಬಂದಿವೆ ಎಂದು ಒಪ್ಪಿಕೊಂಡಿದ್ದೇವೆ.